# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 398
ಉತ್ತರಿಸಬೇಕಾದ ದಿನಾಂಕ : 21.12.2022
ಸದಸ್ಯರ ಹೆಸರು : ಶ್ರೀ. ಮುನಿರಾಜು ಗೌಡ ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರ ಜಿಲ್ಲೆಯ ತಾಲ್ಲೂಕು ಕಾರ್ಯಾಲಯದಲ್ಲಿ ಕಂದಾಯ ಇಲಾಖೆಯ ದಾಖಲೆಗಳು ಸಕಾಲದಲ್ಲಿ ಸಾರ್ವಜನಿಕರಿಗೆ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸಕಾಲದಲ್ಲಿ ಸಾರ್ವಜನಿಕರಿಗೆ ದಾಖಲೆಗಳು ದೊರೆಯುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು: | ಬೆಂಗಳೂರು ನಗರ ಜಿಲ್ಲೆಯ ತಾಲ್ಲೂಕು ಕಾರ್ಯಾಲಯದಲ್ಲಿ ಸಕಾಲ ಯೋಜನೆಯು ಜಾರಿಯಲ್ಲಿದ್ದು, ದಾಖಲೆಗಳನ್ನು ಕೋರಿ ಸಕಾಲ ಕಾಯ್ದೆಯಡಿ ಮನವಿ ಸಲ್ಲಿಸುವ ಅರ್ಜಿದಾರರುಗಳಿಗೆ ಸಕಾಲ ಕಾಯ್ದೆಯಡಿ ನಿಗಧಿ ಪಡಿಸಿರುವ ಅವಧಿಯಲ್ಲಿ ದಾಖಲೆಗಳನ್ನು ನೀಡಲು ಕ್ರಮವಹಿಸಲಾಗುತ್ತಿರುತ್ತದೆ. |
| ಆ | ಬೆಂಗಳೂರು ನಗರ ಜಿಲ್ಲೆಯಲ್ಲಿ ಭೂ ದಾಖಲಾತಿಗಳಿಗಾಗಿ 2020-2021 ಮತ್ತು 2021-22ನೇ ಸಾಲಿನಲ್ಲಿ ಸಲ್ಲಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು; ಸಕಾಲದಲ್ಲಿ ದಾಖಲೆ ನೀಡಿದ ಹಾಗೂ ದಾಖಲೆಗಳನ್ನು ನೀಡದ ಪ್ರಕರಣಗಳು ಎಷ್ಟು: (ತಾಲ್ಲೂಕುವಾರು. ವರ್ಷವಾರು ವಿವರ ನೀಡುವುದು) | ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ) |
| ಇ | ತಾಲ್ಲೂಕು ಅಭಿಲೇಖಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು; ಸದರಿಯವರು ಎಷ್ಟು ವರ್ಷಗಳಿಂದ ಕಾರ್ಯಾಲಯದಲ್ಲಿನ ಅಭಿಲೇಖಾಲಯದ ವಿಷಯ ನಿರ್ವಾಹಕರಾಗಿದ್ದಾರೆ. | 1. **ಬೆಂಗಳೂರು ಉತ್ತರ ತಾಲ್ಲೂಕಿನ** ಅಭಿಲೇಖಾಲಯದಲ್ಲಿ ಇಬ್ಬರು ಸಿಬ್ಬಂದಿಗಳು ಕಾರ್ಯನಿರ್ವಹಿಸು ತ್ತಿರುತ್ತಾರೆ.<br>ವಿಷಯ ನಿರ್ವಾಹಕರು:1, ಡಿ-ಗ್ರೂಪ್:1 ಸುಮಾರು 5 ವರ್ಷಗಳಿಂದ ಕಾರ್ಯ ನಿರ್ವಾಹಿಸುತ್ತಿರುತ್ತಾರೆ.<br>2. **ಬೆಂಗಳೂರು ದಕ್ಷಿಣ ತಾಲ್ಲೂಕಿನ** ಅಭಿಲೇಖಾಲಯದಲ್ಲಿ ನಾಲ್ಕು ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ.<br>ವಿಷಯ ನಿರ್ವಾಹಕರು: 1, ಗ್ರಾಮ ಸಹಾಯಕರು:3 ಸುಮಾರು 6 ತಿಂಗಳಿಂದ ಕಾರ್ಯ ನಿರ್ವಹಿಸುತ್ತಿರುತ್ತಾರೆ.<br>3. **ಬೆಂಗಳೂರು ಪೂರ್ವ ತಾಲ್ಲೂಕಿನ** ಅಭಿಲೇಖಾಲಯದಲ್ಲಿ ಐದು ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ.<br>ಇಬ್ಬರು ಗ್ರಾಮ ಸಹಾಯಕರು ಕಳೆದ 01 ತಿಂಗಳಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ<br>ಇಬ್ಬರು ಸುಮಾರು 2 ವರ್ಷಗಳಿಂದ ಒಬ್ಬರು ಕಳೆದ 01 ತಿಂಗಳಿಂದ ಕಾರ್ಯ ನಿರ್ವಹಿಸುತ್ತಿರುತ್ತಾರೆ. |

| ತಾಲ್ಲೂಕು | ಸಾಲು | ಸ್ವೀಕೃತಿ | ಸಕಾಲದಲ್ಲಿ ದಾಖಲೆ ನೀಡಿರುವ ಪ್ರಕರಣಗಳು | ಸಕಾಲದಲ್ಲಿ ದಾಖಲೆ ನೀಡದಿರುವ ಪ್ರಕರಣಗಳು |
|---|---|---|---|---|
| ಬೆಂಗಳೂರು ಉತ್ತರ | 2020-21 | 3368 | 3368 | 0 |
| | 2021-22 | 3606 | 3606 | 0 |
| ಬೆಂಗಳೂರು ದಕ್ಷಿಣ | 2020-21 | 2143 | 2143 | 0 |
| | 2021-22 | 6213 | 6213 | 0 |
| ಬೆಂಗಳೂರು ಪೂರ್ವ | 2020-21 | 7291 | 7291 | 0 |
| | 2021-22 | 7365 | 7245 | 120 |
| ಯಲಹಂಕ | 2020-21 | 7404 | 7404 | 0 |
| | 2021-22 | 7578 | 7578 | 0 |
| ಆನೇಕಲ್ | 2020-21 | 7243 | 7243 | 0 |
| | 2021-22 | 12272 | 12272 | 0 |

. . . 2

| | | |
|---|---|---|
| | | **4. ಯಲಹಂಕ ತಾಲ್ಲೂಕಿನ** ಅಭಿಲೇಖಾಲಯದಲ್ಲಿ ಒಟ್ಟು 6 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಅಭಿಲೇಖಾಲಯ ಶಾಖೆಯ ಹಾಲಿ ವಿಷಯ ನಿರ್ವಾಹಕರು ಸುಮಾರು 1 ವರ್ಷದಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ.<br><br>**5. ಆನೇಕಲ್ ತಾಲ್ಲೂಕಿನ** ಅಭಿಲೇಖಾಲಯದಲ್ಲಿ ಒಟ್ಟು 3 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ವಿಷಯ ನಿರ್ವಾಹಕರು 1 ವರ್ಷದಿಂದ ಹಾಗೂ ಡಿ-ಗ್ರೂಪ್ ಹಾಗೂ ಗ್ರಾಮ ಸಹಾಯಕರು ಸುಮಾರು 2 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುತ್ತಾರೆ. |
| ಈ | ಭೂಮಾಪನ ಇಲಾಖೆಯ ರೀತಿಯಲ್ಲಿ ಕಂದಾಯ ಇಲಾಖೆಯ ದಾಖಲಾತಿಗಳನ್ನು ಸಹ online ನಲ್ಲಿ ಪಡೆಯುವ ವ್ಯವಸ್ಥೆಯನ್ನು ಸರ್ಕಾರ ಮಾಡಲು ಇಚ್ಛಿಸಿದೆಯೇ? ಇಚ್ಛಿಸಿದ್ದಲ್ಲಿ, ಯಾವ ಕಾಲ ಮಿತಿಯಲ್ಲಿ ಮಾಡಲಾಗುವುದು? | 2000-2001ನೇ ಸಾಲಿನಿಂದ ಪಹಣಿ ಮತ್ತು ಮ್ಯುಟೇಷನ್ ಗಳು online ನಲ್ಲಿ ಲಭ್ಯವಿರುತ್ತವೆ. ಅದಕ್ಕೂ ಹಿಂದಿನ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ ಸಂಗ್ರಹಿಸಿ ಸಾರ್ವಜನಿಕರಿಗೆ ತ್ವರಿತವಾಗಿ ವಿತರಿಸುವ ನಿಟ್ಟಿನಲ್ಲಿ ಎಂ.ಎಲ್.ಆರ್ (Modernisation of Land Records) ಯೋಜನೆಯಡಿ ಅನುದಾನ ಬಿಡುಗಡೆಯಾಗಿದ್ದು ಅಭಿಲೇಖಾಲಯದ ಕಡತಗಳ ಸ್ಕ್ಯಾನಿಂಗ್ ಮತ್ತು ಡಿಜಿಟಲೈಸೇಷನ್ ಗೆ ಕ್ರಮವಹಿಸಲಾಗುತ್ತಿದೆ. |

ಕಂಇ 374 ಎಂಆರ್ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು